44ರ ಸಾರ್ಥಕ ಸೇವೆಯ ಸಂಭ್ರಮದಲ್ಲಿ..,

# ತುಂಗಾ ತರಂಗ ನಂ 1

Tunga Taranga Kannada Daily ಕನ್ನಡ ದಿನಪತ್ರಿಕೆ

web:tungataranga.com, Face Book Twiitter, Google+, Khoo, Instgram watsp: 94482 56183, 7483162573

ಸಂಪಾದಕ/ಪ್ರಕಾಶಕ: ಎಸ್.ಕೆ. ಗಜೇಂದ್ರಸ್ವಾಮಿ, ಸ್ಥಾಪಕ ಸಂಪಾದಕ: ಜೇವಿಯರ್ ಡೇವಿಡ್, ವ್ಯವಸ್ಥಾಪಕ ಸಂಪಾದಕ: ಡಿ.ಬಿ. ವಿಜಯಕುಮಾರ್

ಸ್ಥಾಪನೆ: 1980, R.N.I. NO. 61997/1994 Reg. No. KA/SK/SMG-212 - 2021-23, www.tungataranga.blogspot.com, gajendraswamy2008@gmail.com, tungataranga@gmail.com,

Volume(ಸಂಪುಟ):44, Issue(ಸಂಚಿಕೆ):304 ಬಿಡಿಪ್ರತಿ: 01 ರೂ ಮಾಸಿಕ 30 ರೂ., ದಿನಾಂಕ: 02-06-2023, ಶುಕ್ರವಾರ Phone: 08182 401087, 9448256183


## 60 ವರ್ಷ ಸಂಭ್ರಮದಲ್ಲಿ 'ಚೇಂಬರ್ ಆಫ್ ಕಾಮರ್ಸ್'

### ಜೂ.04ರಂದು ಸಂಘದ ಸಂಸ್ಥಾಪನಾ ದಿನಚರಣೆ ಆಯೋಜನೆ । ಅಧ್ಯಕ್ಷ ಎನ್.ಗೋಪಿನಾಥ್ ವಿವರ



ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘವು ವಜ್ರ ಮಹೋತ್ಸವದ ಆಚರಣೆಯ ಸಂಭ್ರಮದಲ್ಲಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸಂಘದ ಪಾತ್ರ ಮುಖ್ಯವಾಗಿದೆ. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಸಂಪರ್ಕದೊಂದಿಗೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಹೀಗಾಗಿ ಸಂಘದ ಬೆಳವಣಿಗೆಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ವಿಶೇಷ ಪುರಸ್ಕಾರ ನೀಡುವ ಉದ್ದೇಶದಿಂದ ಸಂಸ್ಥಾಪಕರ ದಿನಾಚರಣೆ ಆಚರಿಸುತ್ತಿದ್ದೇವೆ.

–ಎನ್.ಗೋಪಿನಾಥ್, ಅಧ್ಯಕ್ಷರು

ಶಿವಮೊಗ್ಗ, ಜೂ.02:
60 ವರ್ಷದ ಸಂಭ್ರಮದಲ್ಲಿರುವ ಜಿಲ್ಲಾ ವಾಣಿಜ್ಯಮತ್ತುಕೈಗಾರಿಕಾ ಸಂಘದ ಸಂಸ್ಥಾಪನಾ ದಿನಚರಣೆಯನ್ನು ಜೂ. 4ರಂದು ಬೆಳಿಗ್ಗೆ 10-15ಕ್ಕೆ ಸಂಘದ ಶಾಂತಲಾ ಸ್ಪೆರೋಕಾಸ್ಟ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್. ಗೋಪಿನಾಥ್ ಹೇಳಿದರು.

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದಿ. ಬಿ.ಎಂ. ನಂಜಪ್ಪ ಹಾಗೂ ದಿ. ಹೆಚ್.ಎಸ್. ಚನ್ನಬಸಪ್ಪನವರ ಕಲ್ಪನೆಯ ಕೂಸು ಇದಾಗಿದೆ. ದಿ. ಆರ್. ಎಸ್. ಅಶ್ವತ್ಥನಾರಾಯಣ ಅವರು ಸ್ಥಾಪಕ ಅಧ್ಯಕ್ಷರಾಗಿದ್ದರು. ನಂತರ ಹಲವಾರು ಪ್ರತಿಭಾವಂತರು ಈ ಸಂಘದ ಅಧ್ಯಕ್ಷರಾಗಿ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಸಂಘದ ಕಾರ್ಯದರ್ಶಿ ವಸಂತ್ ಹೋಬಳಿದಾರ್ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿ ಕರ್ನಾಟಕ ವಾಣಿಜ್ಯ ಮತ್ತುಕೈಗಾರಿಕಾ ಮಹಾ ಸಂಸ್ಥೆಯ ಅಧ್ಯಕ್ಷ ಬಿ.ವಿ. ಗೋಪಾಲರೆಡ್ಡಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. 2023ನೇ ಸಾಲಿನ ವಾಣಿಜ್ಯ ಪ್ರಶಸ್ತಿಯನ್ನು ಸುಧಾ ಟ್ರೇಡರ್ಸ್‌ನ ರಾಘವೇಂದ್ರ ರಾವ್ ಮತ್ತು ಪಾಲುದಾರರಿಗೆ ಎಪಿಎಂಸಿ ಆವರಣದಲ್ಲಿರುವ ಶಿವಲಿಂಗೇಶ್ವರ ಅರೆಕಾನಟ್ ಟ್ರೇಡರ್ಸ್‌ನ ಬಿ.ಎಂ. ಶಂಕರಪ್ಪ ಮತ್ತು ಪಾಲುದಾರರಿಗೆ, ಆಟೋ ಕಾಂಪ್ಲೆಕ್ಸ್‌ನ ಶ್ರೀ ಮಲ್ಲಿಕಾರ್ಜುನ ಆಗ್ರೋ ಸ್ಪೇರ್ಸ್‌ನ ಎಂ.ಎಂ. ಸುರೇಶ್ ಮತ್ತು ಪಾಲುದಾರರಿಗೆ ನೀಡಲಾಗಿದ್ದು, ಅವರನ್ನು ಸನ್ಮಾನಿಸಲಾಗುವುದು ಎಂದರು.

ಹಾಗೆಯೇ ಬಸ್ ಮಾಲೀಕ ಆರ್. ರಂಗಪ್ಪ, ಅಂತರರಾಷ್ಟ್ರೀಯ ಯೋಗಪಟು ಸವಿತಾ ಮಾಧವ್, ರಾಜ್ಯ ಜ್ಯುವೆಲ್ಲರಿ ಫೆಡರೇಷನ್ನಿನ ಉಪಾಧ್ಯಕ್ಷ ವಿನೋದ್ ಕುಮಾರ್ ಜೈನ್ ಅವರಿಗೆ ವಿಶೇಷ ಪುರಸ್ಕಾರ ನೀಡಿ ಸನ್ಮಾನಿಸಲಾಗುವುದು ಎಂದರು.

ಹಾಗೆಯೇ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಹತ್ತು ಸ್ಟಾಲ್‌ಗಳನ್ನು ನಿರ್ಮಿಸಿ ಉತ್ಪನ್ನಗಳನ್ನು ಮಾರಾಟ ಮಾಡಲು ಉದ್ಯಮಿಗಳಿಗೆ ಅವಕಾಶ ಕಲ್ಪಿಸಲಾಗುವುದು. ಹಾಗೆಯೇ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ವಿಶೇಷ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಬಿ. ಗೋಪಿನಾಥ್ ಜಂಟಿ ಕಾರ್ಯದರ್ಶಿ ಜಿ. ವಿಜಯಕುಮಾರ್, ನಿರ್ದೇಶಕರುಗಳಾದ ಬಿ.ಆರ್. ಸಂತೋಷ್, ಇ. ಪರಮೇಶ್ವರ, ಮರಿಸ್ವಾಮಿ, ಗಣೇಶ್ ಎಂ. ಅಂಗಡಿ, ವಿಶೇಷ ಆಹ್ವಾನಿತ ಎಂ.ಎ. ರಮೇಶ್ ಹೆಗಡೆ ಉಪಸ್ಥಿತರಿದ್ದರು.

## ಡಿಕೆಶಿಗೆ ಬಿಗ್ ರಿಲೀಫ್

ಬೆಂಗಳೂರು, ಜೂ.02:
ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದ್ದು, ಮಧ್ಯಂತರ ತಡೆಯಾಜ್ಞೆಯನ್ನು ವಿಸ್ತರಣೆ ಮಾಡಿ ಆದೇಶ ಹೊರಡಿಸಿದೆ.

ಡಿಕೆ ಶಿವಕುಮಾರ್ ವಿರುದ್ಧ ಪ್ರಕರಣದ ಸಿಬಿಐ ತನಿಖೆಗೆ ಕರ್ನಾಟಕ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿತ್ತು.

ಈ ತಡೆಯಾಜ್ಞೆ ತೆರವು ಮಾಡುವಂತೆ ಸಿಬಿಐ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿತ್ತು. ಆದರೆ ಇಂದು ಹೈಕೋರ್ಟ್ ಏಕಸದಸ್ಯ ಪೀಠ ವಿಚಾರಣೆ ನಡೆಸಿದ್ದ, ಸಿಬಿಐ ತನಿಖೆಗೆ ನೀಡಿದ್ದ ಮಧ್ಯಂತರ ತಡೆಯಾಜ್ಞೆ ವಿಸ್ತರಣೆ ಮಾಡಿದೆ. ಈ ಮೂಲಕ ಡಿಕೆ.ಶಿವಕುಮಾರ್ ಅವರಿಗೆ ಬಿಗ್ ರಿಲೀಫ್ ಸಿಕ್ಕಂತಾಗಿದೆ.

## ಕುಸ್ತಿಪಟುಗಳಿಗೆ ನ್ಯಾಯ ಒದಗಿಸಲು ಒತ್ತಾಯ



ಶಿವಮೊಗ್ಗ, ಜೂ.02:
ದೆಹಲಿಯಲ್ಲಿ ನಡೆಯುತ್ತಿರುವ ಮಹಿಳಾ ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ ಸೂಚಿಸಿ ಭದ್ರಾವತಿಯ ದಯಾನಂದ ಟಿ.ಎಸ್. ಮತ್ತು ಸ್ನೇಹಿತರು ಹಾಗೂ ಕೆ.ಆರ್.ಎಸ್.ಪಾರ್ಟಿಯ ಸದಸ್ಯರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಕುಸ್ತಿಪಟುಗಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ದೌರ್ಜನ್ಯ ಎಸಗುತ್ತಿರುವ ಉತ್ತರ ಪ್ರದೇಶದ ಸಂಸದ ಹಾಗೂ ಡಬ್ಲ್ಯುಎಫ್ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಬೇಕು. ಸಂಸದ ಸ್ಥಾನಕ್ಕೆ ರಾಜೀನಾಮೆ ಪಡೆದು ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಮಹಿಳಾ ಕುಸ್ತಿಪಟುಗಳಿಗೆ ಆದ ಅನ್ಯಾಯ ಸರಿಪಡಿಸಬೇಕೆಂದು ಪ್ರತಿಭಟನಕಾರರು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಎನ್.ಡಿ. ಅಯಾಜ್, ರಫಿಕ್, ತೀರ್ಥ, ಆನಂದ, ಪ್ರವೀಣ್‌ಕುಮಾರ್, ನೂತನ್ ಮತ್ತಿತರರಿದ್ದರು.

## ನಾಳೆ ಮಧು ಬಂಗಾರಪ್ಪ ಶಿವಮೊಗ್ಗಕ್ಕೆ

### ಕಾಂಗ್ರೆಸ್ ಸಮಿತಿಯಿಂದ ಅಭಿನಂದನೆ । ಎಂಆರ್‌ಎಸ್ ವೃತ್ತದಿಂದ ಬೈಕ್ ರ‍್ಯಾಲಿ ಮೂಲಕ ಮೆರವಣಿಗೆ । ಜಿಲ್ಲಾಧ್ಯಕ್ಷ ಹೆಚ್.ಎಸ್.ಸುಂದರೇಶ್



ಶಿವಮೊಗ್ಗ, ಜೂ.03:
ನೂತನ ಸಚಿವರಾಗಿರುವ ಮಧು ಬಂಗಾರಪ್ಪ ಅವರನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಜೂ.3ರಂದು ಅಭಿನಂದಿಸಲಾಗುವುದು ಎಂದು ಜಿಲ್ಲಾ ಅಧ್ಯಕ್ಷ ಹೆಚ್.ಎಸ್. ಸುಂದರೇಶ್ ಹೇಳಿದರು.

ಅವರು ಇಂದು ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಪೂರ್ಣ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಶಿವಮೊಗ್ಗ ಜಿಲ್ಲೆಗೂ ಪ್ರಾತಿನಿಧ್ಯ ಸಿಕ್ಕಿದೆ. ಮಧು ಬಂಗಾರಪ್ಪ ಅವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿ ಆಯ್ಕೆಯಾಗಿದ್ದಾರೆ. ಸಚಿವರಾದ ಮೇಲೆ ಮೊದಲ ಬಾರಿಗೆ ಶಿವಮೊಗ್ಗಕ್ಕೆ ಜೂ.3ರಂದು ಆಗಮಿಸಲಿದ್ದಾರೆ. ಅಂದು ಅವರನ್ನು ಜಿಲ್ಲಾ ಕಾಂಗ್ರೆಸ್ ವತಿಯಿಂದ ಹೃತ್ಪೂರ್ವಕವಾಗಿ ಸ್ವಾಗತಿಸಿ ಸನ್ಮಾನಿಸಲಾಗುವುದು ಎಂದರು.

ಮಧು ಬಂಗಾರಪ್ಪ ಅವರು ಅಂದು ಬೆಳಗ್ಗೆ ಎಂಆರ್‌ಎಸ್ ವೃತ್ತದಿಂದ ಅವರನ್ನು ಬೈಕ್ ಹಾಗೂ ವಾಹನಗಳ ರ‍್ಯಾಲಿಯ ಮೂಲಕ ಮೆರವಣಿಗೆಯಲ್ಲಿ ಕರೆತರಲಾಗುವುದು. ನಂತರ 10-30ಕ್ಕೆ ನಗರ ಲಗಾನ್ ಮಂದಿರದಲ್ಲಿ ಅಭಿನಂದಿಸಲಾಗುವುದು ಎಂದರು.

ಮಧು ಬಂಗಾರಪ್ಪ ಅವರ ಜೊತೆಗೆ ಶಾಸಕರಾಗಿ ಆಯ್ಕೆಯಾಗಿರುವ ಬೇಳೂರು ಗೋಪಾಲಕೃಷ್ಣ ಮತ್ತು ಬಿ.ಕೆ. ಸಂಗಮೇಶ್ ಅವರನ್ನು ಸನ್ಮಾನಿಸಲಾಗುವುದು.

(2ನೇ ಪುಟಕ್ಕೆ........)



ಶಿವಮೊಗ್ಗ: ನಗರದ ಬೊಮ್ಮನಕಟ್ಟೆಯ ಸಿಡಿಲುಗೆ ಬಲಿಯಾದ ಲಕ್ಷ್ಮಿ ಅವರ ನಿವಾಸಕ್ಕೆ ಭೇಟಿ ನೀಡಿ ಜಿಲ್ಲಾಡಳಿತ ವತಿಯಿಂದ 5 ಲಕ್ಷ ಪರಿಹಾರವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಪರಶುರಾಮ್, ಮಹಾನಗರ ಪಾಲಿಕೆಯ ಮೇಯರ್ ಶಿವಕುಮಾರ್, ಮಾಜಿ ಸೂಡ ಅಧ್ಯಕ್ಷ ನಾಗರಾಜ್, ಪಾಲಿಕೆ ಸದಸ್ಯರಾದ ಆಶಾ ಚಂದ್ರಪ್ಪ, ಬಿಜೆಪಿ ಮುಖಂಡ ಚಂದ್ರಪ್ಪ ಮತ್ತಿತರರಿದ್ದರು.



ಶಿವಮೊಗ್ಗ: ಪರಿಸರ ಪ್ರೇಮಿಗಳಾದ ಪ್ರಕಾಶ್ ಪ್ರಭು, ಲಕ್ಷ್ಮಿನಾರಾಯಣ ಕಾಶಿಮತ್ತು ಉಮೇಶ್ ಅವರು ನೂತನ ಶಾಸಕ ಎಸ್.ಎನ್. ಚನ್ನಬಸಪ್ಪ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಶುಭಾಶಯ ಕೋರಿದರು.

## ಜವಳಿ ಇಲಾಖೆಯ ನೀತಿ ನಿಯಮ ಸಮಗ್ರ ತನಿಖೆಗೆ ಆಗ್ರಹಿಸಿ ಪ್ರತಿಭಟನೆ



ಶಿವಮೊಗ್ಗ, ಜೂ.02:
ಕೈಮಗ್ಗ ಮತ್ತು ಜವಳಿ ಇಲಾಖೆಯ ನೀತಿ ನಿಯಮಗಳ ಸಮಗ್ರ ಹಾಗೂ ಸ್ವತಂತ್ರ ತನಿಖೆ ಮಾಡಬೇಕೆಂದು ಒತ್ತಾಯಿಸಿ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘಗಳ ಮಹಿಳೆಯರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಸಂಸ್ಥಾಪಕರಾದ ಚರಕಪ್ರಸನ್ನ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಪವಿತ್ರ ವಸ್ತ್ರ ಅಭಿಯಾನದಡಿ ಚರಕ ಮಹಿಳಾ ಸಹಕಾರ ಸಂಘವು ನೈಸರ್ಗಿಕ ಬಣ್ಣದ ಕೈಮಗ್ಗ ಬಟ್ಟೆ ಹಾಗೂ ಸಿದ್ಧ ಉಡುಪುಗಳ ಕ್ಷೇತ್ರದಲ್ಲಿ ದೇಶದಲ್ಲಿಯೆ ಮೊದಲ ಸಂಸ್ಥೆಯಾಗಿದ್ದು, 700 ಜನ ನೇಕಾರರು ಹಾಗೂ ತತ್ಸಂಬಂಧಿ ಕೆಲಸಗಾರರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟಿದೆ. ಸಂಘದ ಶೇ.90 ಪ್ರತಿಶತ ಸದಸ್ಯರು ಬಿಪಿಎಲ್ ಮಿತಿಗಿಂತ ಕೆಳಗಿನ ಬಡ ಜನರೇ ಆಗಿರುತ್ತಾರೆ. ಸಂಘವು ಕೂಡ ಲಾಭದಾಯಕವಾಗಿ ನಡೆಯುತ್ತಿದ್ದರೂ ಕೈಮಗ್ಗ ಇಲಾಖೆ ತೀವ್ರವಾದ ಅಸಡ್ಡೆ ಹಾಗೂ ಅವಗಣನೆಗೆ ಸಂಘವನ್ನು ಗುರಿಮಾಡಿದ್ದು, ಕಳೆದ ಹಲವಾರು ವರ್ಷಗಳಿಂದ ಸಂಘಕ್ಕೆ ಪಾವತಿಯಾಗಬೇಕಿದ್ದ 90 ಲಕ್ಷಕ್ಕೂ ಹೆಚ್ಚು ಹಣವನ್ನು ಖಾಸಗಿ ಬ್ಯಾಂಕಿನಲ್ಲಿ ಇಟ್ಟು ವರ್ಷಗಟ್ಟಲೆ ಸತಾಯಿಸುತ್ತಿದೆ.

(2ನೇ ಪುಟಕ್ಕೆ...)

## ಜಾತಿವಾರು ಸಮೀಕ್ಷೆಯ ವರದಿ ಕೂಡಲೇ ಅಂಗೀಕರಿಸಿ

### ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಹಿಂದುಳಿದ ಜನಜಾಗೃತಿ ವೇದಿಕೆ ಆಗ್ರಹ

ಶಿವಮೊಗ್ಗ, ಜೂ.02:
ಹೆಚ್. ಕಾಂತರಾಜು ಅವರ ಆಯೋಗದ ನೇತೃತ್ವದಲ್ಲಿ ನಡೆದಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯ ವರದಿಯನ್ನು ಈ ಕೂಡಲೇ ಅಂಗೀಕರಿಸಬೇಕು ಎಂದು ಜಿಲ್ಲಾ ಹಿಂದುಳಿದ ಜನಜಾಗೃತಿ ವೇದಿಕೆ ಆಗ್ರಹಿಸಿದೆ.

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ವೇದಿಕೆಯ ಅಧ್ಯಕ್ಷ ತೀ. ನ. ಶ್ರೀನಿವಾಸ, ವಿಧಾನಸಭೆ ಮತ್ತು ಲೋಕಸಭೆಯಲ್ಲಿಯೂ ಸಹ ಎಸ್ಸಿ/ಎಸ್ಟಿಗೆ ಮೀಸಲಿಟ್ಟಂತೆ ಹಿಂದುಳಿದ ವರ್ಗಗಳಿಗೂ ಜನಸಂಖ್ಯೆಗೆ ಅನು ಗುಣವಾಗಿ ರಾಜಕೀಯ ಮೀಸಲಾತಿ ನೀಡಬೇಕೆಂದು ಒತ್ತಾಯ ಮಾಡಿದರು.

ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಕೈಗೊಂಡಿರುವ ಚೈತನ್ಯ ಸ್ವಯಂ ಉದ್ಯೋಗ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ಚೈತನ್ಯ ಸಬ್ಸಿಡಿ, ಸಾಫ್ಟ್ ಲೋನ್ ಯೋಜನೆ, ಕಿರು ಸಾಲ ಯೋಜನೆ, ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಸಾಲ-ಸಹಾಯಧನ, ಇನ್ನೂ ಇತರೆ ಕಾರ್ಯಕ್ರಮಗಳು ಸ್ಥಗಿತಗೊಂಡಿರುತ್ತವೆ. ಈ ಯೋಜನೆಗಳಿಗೆ ಕೂಡಲೇ ಹಣ ಬಿಡುಗಡೆಗೊಳಿಸಿ ಶೀಘ್ರ ಜಾರಿಗೊಳಿಸಲು ಅವರು ಒತ್ತಾಯಿಸಿದರು.

ಹಿಂದುಳಿದ ವರ್ಗಗಳ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮವಹಿಸುತ್ತಿಲ್ಲ, ಶೀಘ್ರ ಕ್ರಮಕೈಗೊಳ್ಳಲು ಒತ್ತಾಯ ಪಡಿಸುತ್ತೇವೆ. ಇವುಗಳ ಜೊತೆಗೆ ಇನ್ನೂ ಅನೇಕ ಹಿಂದುಳಿದ ವರ್ಗಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿದ್ದು ಕೂಡಲೇ ಇವುಗಳನ್ನು ಮುಂದುವರೆಸಬೇಕೆಂದು ಆಗ್ರಹಿಸಿದರು.

ಪ್ರವರ್ಗ 1 ಮತ್ತು 2ಎ ನಲ್ಲಿ ಸುಮಾರು 2 ಕೋಟಿಯಷ್ಟು ಜನಸಂಖ್ಯೆ ಹೊಂದಿದ್ದು ಕೇವಲ 80 ಕೋಟಿಗಳನ್ನು ಮೀಸಲಿಟ್ಟಿದ್ದು 20 ಕೋಟಿಗಳನ್ನು ಬಿಡುಗಡೆಗೊಳಿಸಿದೆ. ಹಾಗಾಗಿ ಈ ವರ್ಗಗಳ ಅಭಿವೃದ್ಧಿಗಾಗಿ ದೇವರಾಜು ಅರಸು ಅಭಿವೃದ್ಧಿ ನಿಗಮಕ್ಕೆ 2000 ಕೋಟಿಗಳನ್ನು ನೀಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ಗೌರವಾಧ್ಯಕ್ಷ ಪ್ರೊ. ಎಚ್. ರಾಚಪ್ಪ, ಪ್ರ. ಕಾರ್ಯದರ್ಶಿ ಸಿ ಬಿ ಮನೋಹರ ಕುಮಾರ್, ಸಂಘಟನಾ ಕಾರ್ಯದರ್ಶಿ ಚನ್ನವೀರಪ್ಪ ಗಾಮನಗಟ್ಟಿ, ಸಂಚಾಲಕರಾದ ಜನಮೇಜಿರಾವ್ ಇತರರಿದ್ದರು.

## ಚುನಾವಣಾ ಪೂರ್ವ ಸಮಿತಿ ಸದಸ್ಯರಾಗಿ ಆರ್‌ಎಂಎಂ

ಶಿವಮೊಗ್ಗ, ಜೂ.02:
ಕೆಪಿಸಿಸಿ ಸಹಕಾರ ವಿಭಾಗದ ಸಂಚಾಲಕರಾಗಿರುವ ಆರ್.ಎಂ. ಮಂಜುನಾಥಗೌಡ ಅವರನ್ನು ಮುಂಬರುವ ಜಿಪಂ ಹಾಗೂ ತಾಪಂ ಚುನಾವಣೆಯ ಪೂರ್ವ ತಯಾರಿ ಸಮಿತಿ ಸದಸ್ಯರಾಗಿ ನೇಮಕ ಮಾಡಿ



ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದೇಶಿಸಿದ್ದಾರೆ.

ಸಮಿತಿಯಲ್ಲಿ 18 ಮಂದಿ ಸದಸ್ಯರಿದ್ದು ಜಿಪಂ ಹಾಗೂ ತಾಪಂ ಚುನಾವಣೆಗಳನ್ನು ನಡೆಸಲು ಸಮಿತಿಯ ಇತರ ಸದಸ್ಯರೊಂದಿಗೆ ಸೇರಿ ಕಾನೂನಾತ್ಮಕ ಸಾಧಕ-ಬಾಧಕಗಳನ್ನು ಪರಾಮರ್ಶಿಸಿ ಹದಿನೈದು ದಿನಗಳ ಒಳಗೆ ಕೆಪಿಸಿಸಿ ಅಧ್ಯಕ್ಷರಿಗೆ ವರದಿ ನೀಡಲು ಸೂಚಿಸಲಾಗಿದೆ. ಅಲ್ಲದೇ ಸಂಬಂಧಪಟ್ಟ ಸ್ಥಳೀಯ ಮುಖಂಡರನ್ನು ಸಂಪರ್ಕಿಸಿ ಚುನಾವಣೆಯಲ್ಲಿ ಬಹುಮತ ಗಳಿಸುವ ನಿಟ್ಟಿನಲ್ಲಿ ಚಿಂತನೆ ನಡೆಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

## ಬೈಸಿಕಲ್ ದಿನಾಚರಣೆ: ಸೈಕ್ಲಿಂಗ್ ಇವೆಂಟ್

ಶಿವಮೊಗ್ಗ, ಜೂ.02: ಎನ್‌ಸಿಡಿ ಘಟಕ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ವಿಶ್ವ ಬೈಸಿಕಲ್ ದಿನಾಚರಣೆ ಪ್ರಯುಕ್ತ 'ಆರೋಗ್ಯಕ್ಕಾಗಿ ಸೈಕಲ್' ಘೋಷವಾಕ್ಯದಡಿ ಜಿಲ್ಲಾಧಿಕಾರಿಗಳಾದ ಡಾ.ಸೆಲ್ವಮಣಿ.ಆರ್ ಮತ್ತು ಜಿ.ಪಂ ಸಿಇಓ ಸ್ನೇಹಲ್ ಸುಧಾಕರ ಲೋಖಂಡೆ ಇವರ ನೇತೃತ್ವದಲ್ಲಿ ಜೂ.03 ರ ಬೆಳಿಗ್ಗೆ 8 ಗಂಟೆಗೆ ಸೈಕ್ಲಿಂಗ್ ಇವೆಂಟ್‌ನ್ನು ಏರ್ಪಡಿಸಲಾಗಿದೆ.

## ಕ.ದ.ಸಂ ಸ ದ ಶಿವಮೊಗ್ಗ ಜಿಲ್ಲಾ ಸಂಚಾಲಕರಾಗಿ ಹರಮಘಟ್ಟ ರಂಗಪ್ಪ

ಬೆಂಗಳೂರು, ಜೂ.2:
ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಮತ್ತು ಮಹಾತ್ಮ ಪ್ರೊಫೆಸರ್ ಬಿ ಕೃಷ್ಣಪ್ಪ ರವರ ಕನಸನ್ನು ನನಸು ಮಾಡುವ ಉದ್ದೇಶ ಕ ದ ಸಂ ಸ ದಾಗಿದೆ ಎಂದು ರಾಜ್ಯ ಸಂಚಾಲಕರಾದ ಡಿ ಆರ್ ಪಾಂಡುರಂಗ ಸ್ವಾಮಿ ರವರು ಬೆಂಗಳೂರಿನ ಹೋಟೆಲ್ ಕಪಿಲಾ ರೆಸಿಡೆನ್ಸಿಯಲ್ಲಿ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ಹೇಳಿದರು.



ಶಿವಮೊಗ್ಗದಲ್ಲಿ ಹರಮಘಟ್ಟ ರಂಗಪ್ಪ ರವರ ನೇತೃತ್ವದಲ್ಲಿ ಶೋಷಿತರ ಪರವಾಗಿ ಹೋರಾಟಗಳನ್ನು ರೂಪಿಸಲಿ, ನಮ್ಮ ಸಂಘಟನೆಯೂ ಬೇರೆ ಬೇರೆ ಇತರೆ ದಲಿತ ಸಂಘಟನೆಗಳಿಗಿಂತ ಭಿನ್ನವಾದ ನಿಲುವನ್ನು, ವಿಶೇಷತೆಗಳನ್ನು ಹೊಂದಿದೆ. ಸಾಮಾನ್ಯ ಜನರ ಕೆಲಸ ಮಾಡಲು ಯಾವ ಸಂಘಟನೆಗಳು ತಯಾರಿಲ್ಲ, ಎಲ್ಲಾ ಸಂಘಟನೆಗಳು ಸ್ವಾರ್ಥಿಗಳಾಗಿವೆ. ಜನಸಾಮಾನ್ಯರಿಂದ ಅಂತರವನ್ನು ಹೊಂದಿದ್ದಾರೆ. ಜನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿಲ್ಲ. ಶೋಷಿತ ಕಟ್ಟ ಕಡೆಯ ಸಮುದಾಯಗಳ ಪರವಾಗಿ ಕೆಲಸವನ್ನು ಮಾಡಲು ಶಿವಮೊಗ್ಗ ಜಿಲ್ಲೆಯಲ್ಲಿ ಸಂಘಟನೆ ಚುರುಕುಗೊಳಿಸುವ ಉದ್ದೇಶದಿಂದ ಹರಮಘಟ್ಟ ರಂಗಪ್ಪ ರವರನ್ನು ಜಿಲ್ಲಾ ಸಂಚಾಲಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ರಾಜ್ಯ ಸಂಘಟನಾ ಸಂಚಾಲಕ ಕೊಡಿಗಲ್ ರಮೇಶ್ ಮಾತನಾಡಿ, ಡಿಆರ್ ಪಾಂಡುರಂಗ ಸ್ವಾಮಿ ರವರ ನೇತೃತ್ವದ ದಲಿತ ಸಂಘರ್ಷ ಸಮಿತಿ ರಾಜ್ಯದಲ್ಲಿ ಉತ್ತಮವಾದ ನಾಯಕತ್ವ ಹೊಂದಿದೆ. ಇದೀಗ ಶಿವಮೊಗ್ಗ ಜಿಲ್ಲೆಯಲ್ಲಿಯು ಸಹ ಹರಮಘಟ್ಟ ರಂಗಪ್ಪ ರವರನ್ನು ಜಿಲ್ಲಾ ಸಂಚಾಲಕರನ್ನಾಗಿ ಆಯ್ಕೆ ಮಾಡಿದ್ದು, ಶಿವಮೊಗ್ಗ ಜಿಲ್ಲೆಯಲ್ಲಿ ಬಲವಾದ ಸಂಘಟನೆ ಯಾಗುವ ನಿರೀಕ್ಷೆ ಹೊಂದಿದ್ದೇವೆ ಪ್ರತಿ ವರ್ಷದಂತೆ ಕ ದ ಸಂ ಸ ರಾಜ್ಯ ಸಮಿತಿಯು ಸರಳ ಸಾಮೂಹಿಕ ವಿವಾಹವನ್ನು ಏರ್ಪಡಿಸಿ ಸಮಾಜದಲ್ಲಿ ಮದುವೆಯಿಂದ ಸಾಲದ ಸುಲಿಗೆ ಪೋಷಕರು ಸಿಲುಕದಂತೆ ವಧುವರರಿಗೆ ಆರ್ಥಿಕ ಸಹಕಾರವನ್ನು ನೀಡುತ್ತಿದ್ದೇವೆ. (2ನೇ ಪುಟಕ್ಕೆ...)

## ವಿಶ್ವ ಪರಿಸರ ದಿನದ ಅಂಗವಾಗಿ ಆನೆಬಿಡಾರದಲ್ಲಿ ಕಾರ್ಯಕ್ರಮಗಳು



ಶಿವಮೊಗ್ಗ, ಜೂ.02:
ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಮಿನಿಸ್ಟ್ರಿ ಆಫ್ ಟೂರಿಸಂ ಬೆಂಗಳೂರು ಇವರ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಿಗೆ ಸಕ್ರೆಬೈಲು ಆನೆ ಬಿಡಾರದಲ್ಲಿ ಜೂ.05 ರ ಬೆಳಿಗ್ಗೆ 9 ಗಂಟೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಹೋಟೆಲ್ ಮಾಲೀಕರು, ಟ್ರಾವೆಲ್ಸ್ ಏಜೆನ್ಸಿ, ಹೋಮ್ ಸ್ಟೇ ಮಾಲೀಕರು, ಜಿಲ್ಲೆಯ ವಿವಿಧ ಪ್ರವಾಸೋದ್ಯಮ ಪಾಲುದಾರರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗೆ ಸೇರಿ ವಿಶ್ವ ಪರಿಸರ ದಿನಾಚರಣೆ, ಸ್ವಚ್ಚತಾ ಕಾರ್ಯಕ್ರಮ ಹಾಗೂ ವಿವಿಧ ಪರಿಸರ ಸಂರಕ್ಷಣಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಜೂ.4ರಂದು: ನಿಮ್ಮೊಳಗಿನ "ಆಧ್ಯಾತ್ಮಿಕತೆ" ಕುರಿತ ವಿಶಿಷ್ಟ ಕಾರ್ಯಾಗಾರ ಆಯೋಜನೆ

ಶಿವಮೊಗ್ಗ, ಜೂ.02:
ನಿಮ್ಮೊಳಗಿನ "ಆಧ್ಯಾತ್ಮಿಕತೆ" ಕುರಿತ ವಿಶಿಷ್ಟ ಕಾರ್ಯಾಗಾರವನ್ನು ಭಾನುವಾರ ಜೂನ್ 4 ರಂದು ಬೆಳಿಗ್ಗೆ 9:30 ರಿಂದ ಸಂಜೆ 5 ವರೆಗೆ ಕುವೆಂಪು ರಂಗಮಂದಿರದಲ್ಲಿ ಯೂನಿವರ್ಸಲ್ ನಾಲೇಜ್ ಟ್ರಸ್ಟ್ ಮಂಗಳೂರು ಇವರು ಏರ್ಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಟ್ರಸ್ಟ್ ನ ಮುಖಂಡರು, ಆಧ್ಯಾತ್ಮಿಕ ಶಕ್ತಿಯ ಮೂಲಕ ಧನಾತ್ಮಕವಾಗಿ ಆಂತರಿಕ ಬದಲಾವಣೆಗೆ ಸಹಾಯ ಮಾಡಿ. ಸಕಾರಾತ್ಮಕ ಜೀವನ, ಹೀಲಿಂಗ್, ಆಧ್ಯಾತ್ಮಿಕತೆ ಮತ್ತು ವೈಯಕ್ತಿಕ ಬೆಳವಣಿಗೆಯ ವಿವಿಧ ಹಂತಗಳನ್ನು ಇನ್ನಷ್ಟು ತಿಳಿದುಕೊಳ್ಳಲು ಆಸಕ್ತಿ ಹೊಂದಿರುವವರಿಗೆ ಇದು ಉತ್ತಮ ಅವಕಾಶವಾಗಿದೆ ಎಂದರು.

ಈ ವಿಶಿಷ್ಟ ಕಾರ್ಯಾಗಾರದಲ್ಲಿ ನಾವು ಇದುವರೆಗೆ ಅರ್ಥಮಾಡಿಕೊಳ್ಳಲಾಗದ ದೇಹ ವಿಜ್ಞಾನ ಹಾಗೂ ಆಧ್ಯಾತ್ಮಿಕತೆ, ಇವುಗಳಿಗೆ ಇರುವ ಸಂಬಂಧಗಳನ್ನು ಅರಿಯಲಿದ್ದೇವೆ. ಈ ಮೂಲಕ ಬಹು ದಿನಗಳು, ಬಹು ತಿಂಗಳುಗಳು, ಬಹು ವರ್ಷಗಳಿಂದ ಗುಣಪಡಿಸಲಾಗದ ಖಾಯಿಲೆಗಳು, ವ್ಯಸನಗಳು, ಮಾನಸಿಕ ಖಿನ್ನತೆ, ಸಂಬಂಧಗಳಲ್ಲಿ ಉಂಟಾಗಿರುವ ಬಿರುಕು ಇತ್ಯಾದಿಗಳನ್ನು ಯಾವುದೇ ಔಷದೋಪಚಾರಗಳಿಲ್ಲದೇ ಸ್ವಯಂ ಗುಣಪಡಿಸಿಕೊಳ್ಳುವ ಶಕ್ತಿಯನ್ನು ಈ ದೇಹ ಹೊಂದಿದೆ ಎಂಬುದರ ಮಹತ್ವವನ್ನು ಉನ್ನತ ತರಬೇತುದಾರರು ತಿಳಿಸಿಕೊಡಲಿದ್ದಾರೆ ಎಂದು ವಿವರಿಸಿದರು.

ಯುನಿವರ್ಸಲ್ ನಾಲೆಡ್ಜ್ ಟ್ರಸ್ಟ್‌ನ ಮಾಸ್ಟರ್ ಟ್ರೈನರ್‌ಗಳ ತಂಡ ಹಾಗೂ ನೇಚರ್ ಪಾಸಿಟಿವ್ ಎನರ್ಜಿ ಹೀಲಿಂಗ್ ವಿಧಾನಗಳ ಅನುಭವಿ ಮಾರ್ಗದರ್ಶಕರು ಉಪಸ್ಥಿತರಿದ್ದು ತಮ್ಮ ಜ್ಞಾನ ಮತ್ತು ಪರಿಣತಿಯನ್ನು ಪಾಲ್ಗೊಳ್ಳುವವರೊಂದಿಗೆ ಹಂಚಿಕೊಳ್ಳಲಿದ್ದಾರೆ. ಈ ಅಭ್ಯಾಸಗಳು ನೀಡುವ ಅದ್ಭುತ ಪ್ರಯೋಜನಗಳ ಪ್ರಾತ್ಯಕ್ಷಿಕೆ ನೀಡಲಿದ್ದಾರೆ ಎಂದು ಹೇಳಿದರು.

ಈ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸುವ ಎಲ್ಲರೂ ಹೆಚ್ಚಿನ ಜ್ಞಾನವನ್ನು ಪಡೆದು ಹೆಚ್ಚಿನ ಮಾನಸಿಕ ಧೃಡತೆಯೊಂದಿಗೆ ಪರಿವರ್ತನೆಯ (2ನೇ ಪುಟಕ್ಕೆ...)

## ಜೂ.4: ನಗರದ ಹಲವೆಡೆ ಕರೆಂಟ್ ಕಟ್

ಶಿವಮೊಗ್ಗ, ಜೂ.02:
ಜೂನ್ 04 ರಂದು ಆಲ್ಕೊಳ ವಿವಿ ಕೇಂದ್ರದಲ್ಲಿ ಮೂರನೇ ತ್ರೈಮಾಸಿಕ ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಕೆಳಕಂಡ ಪ್ರದೇಶಗಳಲ್ಲಿ ಅಂದು ಬೆಳಿಗ್ಗೆ 10 ಗಂಟೆಯಿಂದ 6 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



ಆಲ್ಕೊಳ, ಸಾಗರ ರಸ್ತೆ, ಗುತ್ಯಪ್ಪ ಕಾಲೋನಿ, ನೇತಾಜಿ ವೃತ್ತ, ನೀಲಮೇಘವ್ ಲೇಔಟ್, ರಾಜಮಹಲ್ ಬಡಾವಣೆ, ಪೊಲೀಸ್ ಲೇಔಟ್, ಕೆಹೆಚ್‌ಬಿ, ಅಲ್ ಹರೀಮ್ ಲೇಔಟ್, ವಿಜಯನಗರ, ಜೆ.ಪಿ.ನಗರ, ಜಿ.ಜಿ.ಬಡಾವಣೆ, ಎಸ್.ವಿ.ಬಡಾವಣೆ, ಗಾಡಿಕೊಪ್ಪ, ನಂಜಪ್ಪ ಹೆಲ್ತ್ ಕೇರ್, ಶರಾವತಿ ದಂತ ವೈದ್ಯಕೀಯ ಕಾಲೇಜು, ಮಲ್ಲಿಗೇನಹಳ್ಳಿ, ದೇವಕಾತಿಕೊಪ್ಪ, ಶ್ರೀರಾಮ್‌ಪುರ, ವಿರುಪಿನಕೊಪ್ಪ, ಸಿದ್ಲಿಪುರ, ಮುದ್ದಿನಕೊಪ್ಪ, ತ್ಯಾವರೆಕೊಪ್ಪ, ಸಿಂಹಧಾಮ, ಗುಡ್ಡದಾರಿ ಕೊಪ್ಪ, ಗಾಲ್ಫ್ ಸ್ಟೇಡಿಯಂ, ಭೂಮಿಕಾ ಇಂಡಸ್ಟ್ರಿ, ಪೆಸಿಟ್ ಕಾಲೇಜ್, ಕೋಟೆ ಗಂಗೂರು, ಗೆಜ್ಜೇನಹಳ್ಳಿ, ಬಸವಗಂಗೂರು, ಸೋಮಿನಕೊಪ್ಪ, ಆದರ್ಶನಗರ, ಸಹ್ಯಾದ್ರಿ ನಗರ, ಜೆ.ಹೆಚ್.ಪಟೇಲ್ ಬಡಾವಣೆ, ಕಾಶೀಪುರ, ಕಲ್ಲಹಳ್ಳಿ, ಶಿವಪ್ಪನಾಯಕ ಬಡಾವಣೆ, ಪ್ರಿಯದರ್ಶಿನಿ ಲೇಔಟ್, ಇಂದಿರಾಗಾಂಧಿ ಲೇಔಟ್, ವಿನೋಬನಗರ, ದಾಮೋದರ್ ಕಾಲೋನಿ, ಚೇತನಾ ಸ್ಕೂಲ್, ಕಲ್ಲಹಳ್ಳಿ, ವಿನೋಬನಗರ 60 ಅಡಿ ರಸ್ತೆ, ಜೈಲ್ ಸರ್ಕಲ್, ಆಟೋ ಕಾಂಪ್ಲೆಕ್ಸ್, ದೈವಜ್ಞ ವೃತ್ತ, ಶರಾವತಿ ನಗರ, ಪೊಲೀಸ್ ಚೌಕಿ, ಮೇದಾರ ಕೇರಿ, ನರಸಿಂಹ ಬಡಾವಣೆ, ಶಾರದಮ್ಮ ಲೇಔಟ್, ಕನಕನಗರ, ದೇವರಾಜ್ ಅರಸ್ ಬಡಾವಣೆ, ಪಿ ಅಂಡ್ ಟಿ ಕಾಲೋನಿ, ಸೂರ್ಯ ಲೇಔಟ್, ಅರವಂದ ನಗರ, ಇಂಡಸ್ಟ್ರಿಯಲ್ ಏರಿಯಾ, ಎಪಿಎಂಸಿ, ವೀರಣ್ಣ ಲೇಔಟ್, ಕಾಶೀಪುರ, ಜಯದೇವ ಬಡಾವಣೆ, ಮೆಗ್ಗಾನ್ ಆಸ್ಪ್ರೆ, ಬೂಸ್ಟರ್ ಪಂಪ್‌ಹೌಸ್, ಕುವೆಂಪು ರಸ್ತೆ, ನರ್ಸ್ ಕ್ವಾಟ್ರರ್ಸ್, ಆಲ್ಕೊಳ ವೃತ್ತ, ಸಹ್ಯಾದ್ರಿನಗರ, ಸಹಕಾರಿ ನಗರ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಿ

## ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಗಳ ಸಭೆಯಲ್ಲಿ ಬಿ.ವೈ.ವಿಜಯೇಂದ್ರ ಕಿವಿಮಾತು

ಶಿಕಾರಿಪುರ, ಜೂ.02:

ಆಸ್ಪತ್ರೆಗೆ ಬರುವ ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸುವ ಮೂಲಕ ಉತ್ತಮ ಆರೋಗ್ಯ ಸೇವೆ ನೀಡಬೇಕು ಎಂದು ಶಾಸಕ ಬಿ.ವೈ. ವಿಜಯೇಂದ್ರ ಕಿವಿಮಾತು ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಗಳ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.



ಆಸ್ಪತ್ರೆಗೆ ಅಗತ್ಯವಾದ ಮೂಲಸೌಲಭ್ಯಗಳನ್ನು ಒದಗಿಸಲು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಸಂಸದ ರಾಘವೇಂದ್ರ ಅವರು ಆದ್ಯತೆ ನೀಡಿದ್ದಾರೆ. ಆದರೆ, ಉತ್ತಮ ಆರೋಗ್ಯ ಸೇವೆ ನೀಡುವ ಜವಾಬ್ದಾರಿ ನಿಮ್ಮ ಮೇಲಿದೆ. ಆಸ್ಪತ್ರೆಗೆ ಆಗಮಿಸುವ ರೋಗಿಗಳನ್ನು ಕುಟುಂಬ ಸದಸ್ಯರಂತೆ ಕಾಣಬೇಕು. ಪ್ರೀತಿಯಿಂದ ಮಾತನಾಡಬೇಕು. ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು. ಕೆಲವು ವೈದ್ಯರು ಹೊರಗಡೆ ಕ್ಲಿನಿಕ್ ನಡೆಸುತ್ತಿರುವ ಬಗ್ಗೆ ಮಾಹಿತಿ ಇದೆ. ಆದರೆ, ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಪ್ರಥಮ ಆದ್ಯತೆ ನೀಡಬೇಕು' ಎಂದು ಸಲಹೆ ನೀಡಿದರು.

ಆಸ್ಪತ್ರೆಯಲ್ಲಿ ಅಹಿತಕರ ಘಟನೆ ನಡೆದರೆ ರಾಜ್ಯಮಟ್ಟದಲ್ಲಿ ಸುದ್ದಿಯಾಗುತ್ತೆ. ಆದಕಾರಣ ಎಲ್ಲರೂ ಎಚ್ಚರ ವಹಿಸಬೇಕು. ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ನೀಡಬೇಕು. ಔಷಧಗಳನ್ನು ಹೊರಗೆ ಖರೀದಿಸುವಂತೆ ಬರೆದು ಕೊಡಬಾರದು. ಜನೌಷಧ ಕೇಂದ್ರ ಹಾಗೂ ಆಸ್ಪತ್ರೆಯಲ್ಲಿನ ಕೇಂದ್ರದಲ್ಲಿ ಔಷಧ ವಿತರಿಸಬೇಕು. ಎಕ್ಸ್ ರೇ ಹಾಗೂ ಸ್ಕ್ಯಾನಿಂಗ್ ಮಾಡಿಸಲು ಖಾಸಗಿ ಲ್ಯಾಬ್‌ಗೆ ಕಳುಹಿಸಬಾರದು. ಆಸ್ಪತ್ರೆಯಲ್ಲಿ ಮಾಡಿಸಬೇಕು ಎಂದು ಸೂಚಿಸಿದರು.

ಇದೇ ಸಂದರ್ಭದಲ್ಲಿ ಆಸ್ಪತ್ರೆಗಳ ಸಮಸ್ಯೆಗಳ ಕುರಿತು ವೈದ್ಯಾಧಿಕಾರಿ ಜತೆ ಚರ್ಚಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜೇಶ್ ಸುರಗೀಹಳ್ಳಿ, ತಾಲ್ಲೂಕು ವೈದ್ಯಾಧಿಕಾರಿ ಡಾ.ನವೀದ್ ಖಾನ್, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಶಿವಾನಂದ್ ಇತರರಿದ್ದರು.

# ..ಸಮಗ್ರ ತನಿಖೆಗೆ ಆಗ್ರಹಿಸಿ ಪ್ರತಿಭಟನೆ

..ಮೊದಲನೇ ಪುಟದಿಂದ

ಮಾತ್ರವಲ್ಲ, ಸರ್ಕಾರವು ಸಂಘದೊಟ್ಟಿಗೆ ಆರಂಭಿಸಿದ ಪಿಪಿಪಿ ಯೋಜನೆ ಪೂರ್ಣಗೊಂಡು ಹಲವು ವರ್ಷಗಳಾದರೂ ಸಂಘಕ್ಕೆ ಇನ್ನೂ ಹಣ ತಲುಪಿಸಿಲ್ಲ. ಸದರಿ ಯೋಜನೆಯನ್ನೇ ಈಗ ರದ್ದುಗೊಳಿಸಿದೆ.

ಸರ್ಕಾರ ಬಿಡುಗಡೆ ಮಾಡಿದ ಹಣವನ್ನು ಜಂಟಿ ಖಾತೆಯಲ್ಲಿ ಇರಿಸಿಕೊಂಡು ಫಲಾನುಭವಿಗಳನ್ನು ಸತಾಯಿಸುವ ಅಕ್ರಮ ವ್ಯವಸ್ಥೆಯೊಂದನ್ನು ಕೈಮಗ್ಗ ಇಲಾಖೆ ಜಾರಿ ಮಾಡಿಕೊಂಡಿದ್ದು, ಇದರಿಂದ ಕೈಮಗ್ಗ ಸಹಕಾರ ಸಂಘಗಳು ನೆಲಕಚ್ಚಿ ಕೆಎಚ್‌ಡಿಸಿ ಮುಚ್ಚುವ ಸ್ಥಿತಿ ತಲುಪಿದೆ. ಈ ಎಲ್ಲಾ ಸಂಗತಿಗಳನ್ನು ಹಲವು ಬಾರಿ ಸರ್ಕಾರದ ಗಮನಕ್ಕೆ ತಂದು ಕಪ್ಪುಪಟ್ಟಿ ಧರಿಸಿ ಉಪವಾಸ ಸತ್ಯಾಗ್ರಹ ಮಾಡಿದರು ಕೂಡ ಸರ್ಕಾರ ಕಿವುಡಾಗಿದ್ದು ಎಂದರು.

ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿಗಳ ಮನವಿ ಸ್ವೀಕರಿಸಿ ಕೆಎಎಸ್ ಅಧಿಕಾರಿಯೊಬ್ಬರಿಂದ ಸಮಗ್ರ ತನಿಖೆ ನಡೆಸಿ ನ್ಯಾಯ ಒದಗಿಸುವ ಭರವಸೆ ನೀಡಿದರು., ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಗೌರಮ್ಮ, ನಿರ್ದೇಶಕಿ ಮಹಾಲಕ್ಷ್ಮಿ, ಕಾರ್ಯದರ್ಶಿ ರಮೇಶ್ ಹಾಗೂ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದ ನೂರಾರು ಮಹಿಳಾ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಸಂಚಾಲಕರಾಗಿ ಹರಮಘಟ್ಟ ರಂಗಪ್ಪ

..ಮೊದಲನೇ ಪುಟದಿಂದ

ಆದ್ದರಿಂದ ಪ್ರತಿ ಜಿಲ್ಲೆಯಿಂದ ಕನಿಷ್ಠ 25ರಿಂದ 50 ಜೋಡಿಗಳನ್ನು ನೋಂದಾಯಿಸಿ ಕರೆದುಕೊಂಡು ಬನ್ನಿರಿ. ಆಗಸ್ಟ್ 26 ಮತ್ತು 27ರಂದು ಸರಳ ಸಾಮೂಹಿಕ ವಿವಾಹ ನಡೆಯಲಿದೆ ಎಂದು ಹೇಳಿದರು.

ರಾಜ್ಯ ಸಂಘಟನಾ ಸಂಚಾಲಕರಾದ ತರೀಕೆರೆ ಎನ್ ವೆಂಕಟೇಶ್ ಮಾತನಾಡಿ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಎಳೆದು ತಂದ ವಿಮೋಚನ ರಥವನ್ನು ಮಹಾತ್ಮ ಪ್ರೊ ಬಿ ಕೃಷ್ಣಪ್ಪ ಎಳೆದು ತಂದಿರುವ ಈ ರಥವನ್ನು ನಾವೆಲ್ಲರೂ ಸಹ ರಕ್ತದ ಕಣಕಣದಲ್ಲಿಯೂ ಶಕ್ತಿ ತುಂಬಿಕೊಂಡು ಪ್ರಾಮಾಣಿಕವಾಗಿ ಸಂಘಟನೆಯನ್ನು ಮಾಡೋಣ. ರಾಜ್ಯಾದ್ಯಂತ ಬಲವಾದ ಸಂಘಟನೆಯನ್ನು ಕಟ್ಟೋಣವೆಂದು ಹೇಳಿದರು. ಇನ್ನೋರ್ವ ರಾಜ್ಯ ಸಂಘಟನಾ ಸಂಚಾಲಕರಾದ ಟಿ ಎಂ ಅಂಜಯ್ಯ ಮಾತನಾಡಿ, ರಾಜ್ಯಾದ್ಯಂತ ಎಲ್ಲಾ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಶಾಖೆಗಳನ್ನು ಸಂಘಟಿಸಬೇಕು ಬಲಪಡಿಸಬೇಕು. ರಾಜಕೀಯ ಶಕ್ತಿಯಾಗಿ ಪರಿವರ್ತಿಸಬೇಕು ಎಂದು ಹೇಳಿದರು.

ಜಿಲ್ಲಾ ಸಂಚಾಲಕರಾದ ಹರಮಘಟ್ಟ ರಂಗಪ್ಪ ಮಾತನಾಡಿ ಕಳೆದ 25 ವರ್ಷಗಳಿಂದ ಸಂಘಟನೆಯಲ್ಲಿ ತೊಡಗಿಸಿಕೊಂಡು ಅನೇಕ ಹೋರಾಟಗಳನ್ನು ಮಾಡುತ್ತಾ ಶೋಷಿತರ ಪರ ಧ್ವನಿಯಾಗಿ ಕೆಲಸ ಮಾಡಿ ಹೋರಾಟದಿಂದ ಸೆರೆಮನೆ ವಾಸದೊಂದಿಗೆ ಅನೇಕ ಕೇಸುಗಳು ನನ್ನ ಮೇಲೆ ದಾಖಲಾಗಿವೆ. ಪಾಂಡುರಂಗ ಸ್ವಾಮಿ ರವರು ನನ್ನ ಹೋರಾಟಗಳಿಗೆ ನ್ಯಾಯ ಬದ್ಧ ಸ್ಥಾನ ನೀಡಿ ಜಿಲ್ಲಾ ಸಂಚಾಲಕರಾಗಿ ಆಯ್ಕೆ ಮಾಡಿರುತ್ತಾರೆ. ಅವರಿಗೆ ಅಭಿನಂದನೆಗಳು. ರಾಜ್ಯ ಸಮಿತಿಯ ಎಲ್ಲಾ ಹೋರಾಟಗಳಿಗೂ ಕಾರ್ಯಕ್ರಮಗಳಿಗೂ ನನ್ನ ಸಹಕಾರ ಎಂದೆಂದಿಗೂ ಇರುತ್ತದೆ ಎಂದು ಹೇಳಿದರು.

# ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ

ಶಿವಮೊಗ್ಗ, ಜೂ.02:

2023-24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ (ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ) ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿಯಿಂದ 10 ನೇ ತರಗತಿವರೆಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 3ಎ, 3ಬಿ, ಪ.ಜಾ/ಪ.ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ತಮ್ಮ ಎಸ್‌ಎಟಿಎಸ್ **((SATS)** ಐಡಿಯೊಂದಿಗೆ ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ವಿಳಾಸ **https://shp.karnataka.gov.in/** ಇಲ್ಲಿ ಅರ್ಜಿ ಸಲ್ಲಿಸುವುದು. ಜೂ.15 ಅರ್ಜಿ ಸಲ್ಲಿಸಲು ಕೊನೆಯ ದಿನ ಆಗಿರುತ್ತದೆ. ವಿಶೇಷ ಸೂಚನೆ: ವಿದ್ಯಾರ್ಥಿಗಳು 2023-24ನೇ ಸಾಲಿನಲ್ಲಿ ಬೇರೆ ಶಾಲೆಗಳಿಗೆ ಪ್ರವೇಶ ಪಡೆದಿದ್ದರೆ ಸದರಿ ವಿದ್ಯಾರ್ಥಿಗಳ ಎಸ್‌ಎಟಿಎಸ್ ಐಡಿಯನ್ನು ಪ್ರಸಕ್ತ ಶಾಲೆಯಲ್ಲಿ, ಸಂಬಂಧಿಸಿದ ಮಾಹಿತಿಯನ್ನು ಇಂಧಿಕರಿಸಿ ಅರ್ಜಿ ಸಲ್ಲಿಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

# ನಾಳೆ ನರೇನ್ ಫಿಟ್‌ನೆಸ್ ಜಿಮ್ ಉದ್ಘಾಟನೆ

ಶಿವಮೊಗ್ಗ, ಜೂ.02:

ವಿನೋಬನಗರದ ಡಿವಿಎಸ್ ಶಾಲೆ ಎದುರಿನಲ್ಲಿ ನಿರ್ಮಿಸಿರುವ ಎ-3 ಆರ್ಕೆಡ್ ಕಟ್ಟಡದಲ್ಲಿ ನರೇನ್ ಫಿಟ್‌ನೆಸ್ ಜಿಮ್‌ನ ಉದ್ಘಾಟನೆಯನ್ನು ಜೂ.3ರ ನಾಳೆ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಫಿಟ್‌ನೆಸ್ ಸೆಂಟರ್‌ನ ಎಸ್. ನರೇಂದ್ರ ಹೇಳಿದರು.

ಅವರು ಇಂದು ಜಿಮ್ ಸೆಂಟರ್‌ನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಶಾಸಕ ಎಸ್.ಎನ್. ಚನ್ನಬಸಪ್ಪ, ಸಂಸದ ಬಿವೈ. ರಾಘವೇಂದ್ರ, ಎಸ್‌ಪಿ ಮಿಥುನ್ ಕುಮಾರ್ ಜಿ.ಕೆ. ಸರ್ಜಿ ಆಸ್ಪತ್ರೆಯ ವೈದ್ಯ ಧನಂಜಯ ಸರ್ಜಿ, ಚಲನಚಿತ್ರ ತಾರೆ ಸಮೀಕ್ಷಾ ಆಗಮಿಸಲಿದ್ದಾರೆ ಎಂದರು.

ವಿಶೇಷ ಆಹ್ವಾನಿತರಾಗಿ ಡಾ. ಲೋಕೇಶ್, ಮಾಜಿ ಸಂಸದ ಆಯನೂರು ಮಂಜುನಾಥ್, ಮಾಜಿ ಶಾಸಕ ಕೆ.ಬಿ.ಪ್ರಸನ್ನಕುಮಾರ್, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕ್ರೀಡಾಸಾಧಕರಾದ ಅರ್ಜುನ ಪ್ರಶಸ್ತಿ ವಿಜೇತ ಎಸ್. ಪ್ರಕಾಶ್, ಏಕಲವ್ಯ ಪ್ರಶಸ್ತಿ ವಿಜೇತರಾದ ಎಂ.ಎಂ ಗೋಪಿ,ನಾಗರಾಜ, ಭಾರತಿ ಅನಿಲ್‌ಕುಮಾರ್, ಶೈಲಜಾ ಕೆ.ಎನ್, ರಾಜ್ಯ ಪ್ರಶಸ್ತಿ ವಿಜೇತ ಸಂಜೀವ ರಾಜಶೇಖರಕನಕ., ಏಷ್ಯನ್ ಮೆಡಲಿಸ್ಟ್ ಅಬ್ದುಲ್ ಜಾಫರ್, ಮಿಸ್ಟರ್ ಇಂಡಿಯಾ ಮೆಡಲಿಸ್ಟ್‌ಗಳಾದ ಆಕಾಶ್, ಲೋಕೇಶ್ ಪಟೇಲ್ ಅವರನ್ನು ಸನ್ಮಾನಿಸಲಾಗುವುದು ಮತ್ತು ಹಿರಿಯ ಕ್ರೀಡಾಪಟುಗಳಾದ ಸತೀಶ್‌ಕುಮಾರ್, ಗೋವಿಂದಣ್ಣ ಜಯಪ್ರಕಾಶ್ ಕಳ್ಳಿ, ವಿಕ್ಟರ್ ಡಿಸೋಜ್, ಡೇವಿಡ್ ಪ್ರಕಾಶ್, ಪ್ರಕಾಶ್‌ರನ್ನು ಸನ್ಮಾನಿಸಲಾಗುವುದು ಎಂದರು.

ನರೇನ್ ಫಿಟ್‌ನೆಸ್‌ನ ತರಬೇತುದಾರ ರೋಹನ್ ಮಾತನಾಡಿ, ನರೇನ್ ಫಿಟ್‌ನೆಸ್ ಶಿವಮೊಗ್ಗದಲ್ಲಿಯೇ ಅತ್ಯುತ್ತಮ ಜಿಮ್ ಆಗಿದೆ. ವಿಶಾಲವಾದ ಎರಡು ಅಂತಸ್ತಿನಲ್ಲಿ ತರಬೇತಿ ನೀಡಲಾಗುವುದು. ಮುಖ್ಯವಾಗಿ ಕಾರ್ಡಿಯೊ, ಸ್ಟ್ರೆಂಥ್ ಟ್ರೈನಿಂಗ್, ಗ್ರೂಪ್ ಕ್ಲಾಸ್, ಕ್ರಾಸ್ ಫಿಟ್, ವರ್ಕೌಟ್‌ಗಳಿಗೆ ವಿಶೇಷ ಸ್ಥಳಾವಕಾಶ ಇದೆ. ಜೊತೆಗೆ ಸ್ಟೀಂ, ಶವರ್ ಬಾತ್ ವ್ಯವಸ್ಥೆ ಇದೆ. ಎಸಿ ವ್ಯವಸ್ಥೆ ಇದೆ. ಅಡ್ವಾನ್ಸ್‌ಡ್, ಕಾಂಪೋಸಿಷನ್, ಅನಲೈಸಿಂಗ್ ಮೆಷಿನ್ ಇದೆ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಎಂಡಿ. ರಾಹುಲ್ ನರೇನ್, ತರಬೇತುದಾರರಾದ ನಾಗೇಂದ್ರ, ಮೇಘಾ , ವೀಣಾ, ಚೇತನ್ ಸೇರಿದಂತೆ ಹಲವರಿದ್ದರು.

# ಬಿರುಗಾಳಿ ಸಹಿತ ಜೋರು ಮಳೆ



ಆನವಟ್ಟಿ, ಜೂ.02:

ಪಟ್ಟಣದಲ್ಲಿ ಬಿರುಗಾಳಿ ಸಹಿತ ಜೋರು ಮಳೆ ಸುರಿದಿದೆ. ಮಳೆ ಹಾಗೂ ಗಾಳಿಯ ಆರ್ಭಟಕ್ಕೆ, ಪಟ್ಟಣದ ದುರ್ಗಮ್ಮ ಬೀದಿಯ ಫಾತಿಮಾ ಎಂಬವರ ಮನೆಯ ಹಿಂಭಾಗದ ಹುಣಸೆಮರವೊಂದು ಶೌಚಾಲಯದ ಮೇಲೆ ಬಿದ್ದಿದೆ. ಈ ಘಟನೆಯಲ್ಲಿ ಶೌಚಾಲಯ ಸಂಪೂರ್ಣ ಹಾನಿಗೊಂಡಿದೆ.

ಎರಡು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ, ಮೆಕ್ಕೆಜೋಳ ಬೆಳೆದ ರೈತರಲ್ಲಿ ಆತಂಕ ಮನೆಮಾಡಿದೆ. ನಿರಂತರ ಮಳೆ ಸುರಿದರೆ ಸಂಪೂರ್ಣ ಫಸಲು ಕಳೆದುಕೊಳ್ಳುವ ಭೀತಿಯಲ್ಲಿ ರೈತರು ಇದ್ದಾರೆ.

# ಕಾಗೋಡು ಸತ್ಯಾಗ್ರಹ ಗೇಣಿ ರೈತರ ಬದುಕಿಗೆ ಹೊಸ ಬೆಳಕು ನೀಡಿದೆ: ಶಿವಾನಂದ ಕುಗ್ವೆ



ಸಾಗರ, ಜೂ.02:

ಮಲೆನಾಡು ಭಾಗದಲ್ಲಿ ಕಾಗೋಡು ಸತ್ಯಾಗ್ರಹ ಗೇಣಿ ರೈತರ ಬದುಕಿಗೆ ಹೊಸ ಬೆಳಕನ್ನು ನೀಡಿದೆ. ಕಾಗೋಡು ಹೋರಾಟದ ಹಿಂದೆ ಪ್ರೇರಕ ಶಕ್ತಿಯಾಗಿ ಇದ್ದವರು ಡಾ. ಎಚ್.ಗಣಪತಿಯಪ್ಪ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಶಿವಾನಂದ ಕುಗ್ವೆ ತಿಳಿಸಿದರು.

ಇಲ್ಲಿನ ಸಾಹಿತ್ಯ ಭವನದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಡಾ. ಎಚ್. ಗಣಪತಿಯಪ್ಪ ಸೇವಾ ಟ್ರಸ್ಟ್ ನೀಡಿದ ದತ್ತಿ ಕಾರ್ಯಕ್ರಮದಲ್ಲಿ ಅವರು ಭೂಮಿ ಮತ್ತು ಬದುಕು ಕುರಿತು ಉಪನ್ಯಾಸ ನೀಡುತ್ತಿದ್ದರು.

ರೈತ ಸಂಘದ ಕಾರ್ಯದರ್ಶಿಯಾಗಿ ಡಾ. ಎಚ್.ಗಣಪತಿಯಪ್ಪ ಗೇಣಿ ರೈತರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ತಮ್ಮದೆ ಪ್ರಯತ್ನ ನಡೆಸಿದವರು. ಆರಂಭದಲ್ಲಿ ಗಾಂಧೀಜಿಯವರ ಪ್ರೇರಣೆಯಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಗಣಪತಿಯಪ್ಪ ಅವರು ಇದಕ್ಕಾಗಿ ತಮ್ಮ ಸರ್ಕಾರಿ ನೌಕರಿಯನ್ನೆ ಕಳೆದುಕೊಂಡಿದ್ದರು. ಕಾಗೋಡು ಸತ್ಯಾಗ್ರಹ ಇಡೀ ವಿಶ್ವದ ಗಮನ ಸೆಳೆಯುವಂತೆ ನಡೆದಿತ್ತು. ಸಮಾಜವಾದಿ ರಾಷ್ಟ್ರೀಯ ನಾಯಕರಾದ ಡಾ. ರಾಮ ಮನೋಹರ ಲೋಹಿಯಾ ಕಾಗೋಡು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದು ಚಳುವಳಿಯ ಬಿಸಿ ರಾಷ್ಟ್ರದಾದ್ಯಂತ ಹಬ್ಬುವಂತೆ ಮಾಡಿತ್ತು ಎಂದು ಹೇಳಿದರು.

ಗೇಣಿ ರೈತರಿಗೆ ಕಾಗೋಡು ಚಳುವಳಿಯ ಮೂಲಕ ಭೂಮಿಹಕ್ಕು ದೊರೆಯಲು ಸಹಕಾರಿಯಾ ಯಿತು. ಗಣಪತಿಯಪ್ಪ ಅವರ ಹೋರಾಟ ಇಂದಿನ ಯುವಜನರಿಗೆ ಪ್ರೇರಣೆಯಾಗಿದೆ. ಇಂದಿಗೂ ಭೂಮಿ ಸಮಸ್ಯೆ ಬಗೆಹರಿದಿಲ್ಲ. ಅನೇಕ ಭೂಹೀನ ಕುಟುಂಬಗಳಿವೆ. ಶರಾವತಿ ಮುಳುಗಡೆ ಸಂತ್ರಸ್ತರು, ಅರಣ್ಯ ವಾಸಿಗಳು ಸೇರಿದಂತೆ ಬೇರೆಬೇರೆ ಭೂಮಿ ಸಮಸ್ಯೆ ನಮ್ಮ ನಡುವೆ ಇದೆ ಎಂದು ಹೇಳಿದರು.

ಸಾಹಿತ್ಯ ಪರಿಷತ್ ಅಧ್ಯಕ್ಷ ವಿ.ಟಿ.ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ನಿವೃತ್ತ ನೌಕರ ಸಂಘದ ಗೌರವಾಧ್ಯಕ್ಷ ಎಸ್.ಬಸವರಾಜ್ ಹಾಜರಿದ್ದರು. ಟ್ರಸ್ಟ್ ಅಧ್ಯಕ್ಷ ಉಮೇಶ್ ಹಿರೇನೆಲ್ಲೂರು ಪ್ರಾಸ್ತಾವಿಕ ಮಾತನಾಡಿದರು. ಎ.ಸಿದ್ದನಾಯಕ್ ವಂದಿಸಿದರು. ಸತ್ಯನಾರಾಯಣ ನಿರೂಪಿಸಿದರು.

# ವಿದ್ಯಾರ್ಥಿಗಳು ನಿರಂಕುಶಮತಿತ್ವ ಅರಿಯಬೇಕಿದೆ

## ಕಸಾಪ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಎಸ್.ಪಿ. ಪದ್ಮಪ್ರಸಾದ್



ಶಿವಮೊಗ್ಗ, ಜೂ.02:

ಕನ್ನಡವನ್ನು ಶೈಕ್ಷಣಿಕ ಭಾಷೆಯಾಗಿ ಬೆಳೆಸಿ ಲಕ್ಷಾಂತರ ಯುವಕರ ಶೈಕ್ಷಣಿಕ ಬದುಕನ್ನು ಹಸನಾಗಿಸಿದವರು ಕುವೆಂಪು ಅವರ ನಿರಂಕುಶ ಮತಿತ್ವವನ್ನು ವಿದ್ಯಾರ್ಥಿಗಳು ಅರಿಯಬೇಕಿದೆ ಎಂದು ಹಿರಿಯ ಸಾಹಿತಿಗಳಾದ ಡಾ.ಎಸ್.ಪಿ. ಪದ್ಮಪ್ರಸಾದ್ ಹೇಳಿದರು.

ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಈಚೆಗೆ ಬಾಲರಾಜ ಅರಸ್ ರಸ್ತೆಯಲ್ಲಿರುವ ಶ್ರೀ ಕುವೆಂಪು ಶತಮಾನೋತ್ಸವ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಉದ್ಯಮಿ ಅಮರೇಂದ್ರ ಕಿರೀಟಿ ಅವರು ತಮ್ಮ ತಂದೆ ಡಿ. ಆರ್. ರತ್ನಾಕರ ಅವರ ಹೆಸರಲ್ಲಿ ನೀಡಿರುವ ದತ್ತಿ ಆಶಯದಂತೆ ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳು ವಿಚಾರವಾಗಿ ಮಾತನಾಡಿದರು.

ಪ್ರತಿಭಾ ಸಾಮರ್ಥ್ಯ ಕನ್ನಡಕ್ಕಿದೆ ಎಂದು ನಂಬಿದ್ದವರು ಕುವೆಂಪು. ಒಬ್ಬ ಪ್ರತಿಭಾವಂತ ತನ್ನ ಭಾಷೆಯನ್ನು ಮೇಲೆಕೆತ್ತ ಬಲ್ಲ ಎನ್ನುವುದನ್ನು ಸಾಧಿಸಿ ತೋರಿಸಿದ್ದರು. ವಿಶ್ವವಿದ್ಯಾಲಯ, ಕಾಲೇಜುಗಳು, ಸಂಶೋಧನೆ, ಪ್ರಸಾರಾಂಗದ ಚಟುವಟಿಕೆಗಳು ಹಳ್ಳಿ ಹಳ್ಳಿಗಳಿಗೆ ವಿಸ್ತಾರವಾಗಬೇಕು ಎಂದು ಬಯಸಿದ್ದರು.

ವೈ.ಎಸ್. ಪುಟ್ಟಣ್ಣ ಅವರು ಗುತ್ತಿಯಡೇಹಳ್ಳಿ ಸೂರಪ್ಪಗೌಡರ ಹೆಸರಲ್ಲಿ ನೀಡಿದ ದತ್ತಿ ಆಶಯದಂತೆ ಡಿ.ವಿ. ಗುಂಡಪ್ಪ ನವರ ಸಾಹಿತ್ಯ ಅವಲೋಕನವನ್ನು ಕಗ್ಗದ ಖ್ಯಾತಿ ವಿದ್ವಾನ್ ಜಿ. ಎಸ್. ನಟೇಶ್ ಮಾತನಾಡಿ, ಡಿ.ವಿ. ಗುಂಡಪ್ಪನವರು ಕಾಲೇಜು ಶಿಕ್ಷಣ ಪಡೆದವರಲ್ಲ. ಹತ್ತನೇ ತರಗತಿ ಅನುತ್ತೀರ್ಣರು. ಅವರು ಸ್ವಂತ ಪರಿಶ್ರಮದಿಂದ ಭಾಷೆಯನ್ನು ಕಲಿತವರು. ಕನ್ನಡ ವನ್ನು ಕಟ್ಟಿ ಬೆಳೆಸಿದವರು. ಅವರಬದುಕು ಮಾದರಿ ಎಂದು ವಿವರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷ ಡಿ. ಮಂಜುನಾಥ ಉದ್ಘಾಟಿಸಿದರು. ಕಾಲೇಜು ಪ್ರಿನ್ಸಿಪಾಲ್ ಡಾ. ಜಿ. ಮಧು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಹೆಚ್. ಬಿ. ಆದಿಮೂರ್ತಿ, ನಿರ್ದೇಶಕರಾದ ಭದ್ರಾವತಿ ಮೂರ್ತಿ, ಕಸಾಪ ತಾಲ್ಲೂಕು ಅಧ್ಯಕ್ಷರಾದ ಮಹಾದೇವಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿಗಳಾದ ದೀಪಿಕಾ ಸಂಗಡಿಗರು ಕುವೆಂಪು ಅವರ ಗೀತೆಗಳನ್ನು ಹಾಡಿದರು.

# ಡಿಪ್ಲೋಮ ಸೀಟುಗಳಿಗೆ ಅರ್ಜಿ

ಶಿವಮೊಗ್ಗ, ಜೂ.02:

ಡಿಪ್ಲೋಮ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ **(f.n.n.[1])**, ಶಿವಮೊಗ್ಗದಲ್ಲಿ 2023-24 ನೇ ಸಾಲಿನ ಇನ್ ಟೂಲ್ ಅಂಡ್ ಡೈ ಮೇಕಿಂಗ್ **(DTDM)** ಕೋರ್ಸ್‌ಗೆ ಖಾಲಿ ಉಳಿದಿರುವ ಸೀಟುಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಕೋರ್ಸ್ 100% ಉದ್ಯೋಗವಕಾಶವನ್ನು ಹೊಂದಿದ್ದು, ಈ ಕೋರ್ಸ್ ಮುಗಿಸಿದ ಕೂಡಲೇ ಉದ್ಯೋಗ ದೊರಕುತ್ತದೆ ಹಾಗು ಉನ್ನತ ವ್ಯಾಸಂಗಕ್ಕೆ ಸಹಕಾರಿಯಾಗಿದೆ. ವಿದ್ಯಾರ್ಥಿನಿಯರಿಗೆ 30%ರಷ್ಟು ಸೀಟು ಮೀಸಲಾತಿ ಇರುತ್ತದೆ. ಸುಸಜ್ಜಿತವಾದ ಬಾಲಕರ ವಸತಿ ನಿಲಯ ಲಭ್ಯವಿದೆ. "ಸೀಟುಗಳನ್ನು ಮೊದಲು ಬಂದ ಅಭ್ಯರ್ಥಿಗಳಿಗೆ ಆಧ್ಯತೆ ಮೇರೆಗೆ ಹಂಚಿಕೆ ಮಾಡಲಾಗುವುದು". ಹೆಚ್ಚಿನ ಮಾಹಿತಿಗಾಗಿ ಘಟಕದ ಮುಖ್ಯಸ್ಥರು ಹಾಗೂ ಪ್ರಾಂಶುಪಾಲರು ಜಿಟಿಟಿಸಿ, ಶಿವಮೊಗ್ಗ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು. ಮಾಹಿತಿಗಾಗಿ 9448307027, 9880141054, 9902232839, 9449286543ಗೆ ಸಂಪರ್ಕಿಸಿ

# ಚೆಸ್ ಕೋರ್ಸಿಗೆ ಅರ್ಜಿ ಆಹ್ವಾನ

ಶಿವಮೊಗ್ಗ, ಜೂ.2:

ನಳಂದ ಚೆಸ್ ಅಕಾಡೆಮಿ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಒಂದು ವರ್ಷದ ಚೆಸ್ ಕೋರ್ಸ್‌ನ್ನು ಜೂ.10 ರಿಂದ ಮಾರ್ಚ್ 15 ರತನಕ ನಡೆಸಲಾಗುವುದು. ವಾರದಲ್ಲಿ ಎರಡು ದಿನ ಚೆಸ್ ತರಬೇತಿ ಇದ್ದು, ಆಟದ ರೀತಿಯಲ್ಲಿ ಪಂದ್ಯಾವಳಿಗಳನ್ನೂ ನಡೆಸಲಾಗುವುದು. ಆನ್ ಲೈನ್ ತರಗತಿಯೂ ಇರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗೆ 9844436276, 9686791209 ಈ ನಂಬರಿಗೆ ಸಂಪರ್ಕಿಸಬಹುದು.

# ನಾಳೆ ಮಧು ಬಂಗಾರಪ್ಪ ಶಿವಮೊಗ್ಗಕ್ಕೆ

..ಮೊದಲನೇ ಪುಟದಿಂದ

ಈ ಕಾರ್ಯಕ್ರಮಕ್ಕೆ ಪಕ್ಷದ ಹಿರಿಯ ಮುಖಂಡರಾದ ಕಾಗೋಡು ತಿಮ್ಮಪ್ಪ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು, ಮಾಜಿ ಸಚಿವರು, ಶಾಸಕರು, ಪದಾಧಿಕಾರಿಗಳು, ಕಾಂಗ್ರೆಸ್ ಕಾರ್ಯಕರ್ತರು, ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಆಗಮಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಪ್ರಮುಖರಾದ ಆರ್.ಪ್ರಸನ್ನ ಕುಮಾರ್, ಹೆಚ್.ಸಿ ಯೋಗೇಶ್, ಜಿ.ಡಿ. ಮಂಜುನಾಥ್, ಕಲಗೋಡು ರತ್ನಾಕರ್, ಹೆಚ್.ಎಂ. ಚಂದ್ರಶೇಖರಪ್ಪ, ಶಂಕರಘಟ್ಟ ರಮೇಶ್, ಇಸ್ಮಾಯಿಲ್ ಖಾನ್, ಚಂದ್ರ ಭೂಪಾಲ್, ಬಲದೇವ ಕೃಷ್ಣ, ವಿಶ್ವನಾಥ ಕಾಶಿ, ರಮೇಶ್ ಇಕ್ಕೇರಿ, ಎನ್.ಡಿ. ಪ್ರವೀಣಕುಮಾರ್ ಮತ್ತಿತರರಿದ್ದರು.

# ಜೂ.4ರಂದು: ನಿಮ್ಮೊಳಗಿನ "ಆಧ್ಯಾತ್ಮಿಕತೆ" ಕುರಿತ ವಿಶಿಷ್ಟ ಕಾರ್ಯಾಗಾರ ಆಯೋಜನೆ

..ಮೊದಲನೇ ಪುಟದಿಂದ

ಅನುಭವವನ್ನು ಹೊಂದಲಿದ್ದಾರೆ. ಸಕಾರಾತ್ಮಕ ಜೀವನ, ಹೀಲಿಂಗ್ಸ್, ಆಧ್ಯಾತ್ಮಿಕತೆ ಮತ್ತು ವೈಯಕ್ತಿಕ ಬೆಳವಣಿಗೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಆಸಕ್ತಿ ಹೊಂದಿರುವವರಿಗೆ ಇದು ಉತ್ತಮ ಅವಕಾಶವಾಗಿದೆ ಎಂದರು.

ಈ ಕಾರ್ಯಾಗಾರಗಳು ಹುಬ್ಬಳ್ಳಿ, ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಯಶಸ್ವಿಯಾಗಿ ನಡೆದಿದ್ದು ನೂರಾರು ಫಲಾನುಭವಿಗಳು ಇದರ ಪ್ರಯೋಜನ ಪಡೆದಿರುತ್ತಾರೆ. ಈ ಕಾರ್ಯಾಗಾರಕ್ಕೆ ಆಹ್ವಾನ ಪತ್ರಿಕೆ ಯೊಂದಿಗೆ ಉಚಿತ ಪ್ರವೇಶವಿದ್ದು ಭಾಗವಹಿಸುವ ಆಸಕ್ತಿ ಹೊಂದಿದ್ದಲ್ಲಿ 9632171156 ಅಥವಾ 9448139271ನ್ನು ಸಂಪರ್ಕಿಸಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟಿನ ಅಧ್ಯಕ್ಷೆ ಶಮ್ಮಿ ಶಿರಿ, ಕಾರ್ಯದರ್ಶಿ ಕೃಷ್ಣಾನಂದ ಶೆಣೈ, ಕಾರ್ಯಕ್ರಮ ಆಯೋಜಕ ನಾಗರಾಜ ಶೆಟ್ಟರ್ ಇದ್ದರು.

# ಸ್ಥಳೀಯ ವಾಸಿಗಳಿಗೆ ಕಿರುಕುಳ ತಪ್ಪಿಸಿ

## ಸಂಪಳ್ಳಿ ಗ್ರಾಮಸ್ಥರಿಂದ ಉಪವಿಭಾಗಾಧಿಕಾರಿಗಳಿಗೆ ಮನವಿ



ಸಾಗರ, ಜೂ.02:

ತಾಲ್ಲೂಕಿನ ಆನಂದಪುರಂ ಹೋಬಳಿಯ ಸಂಪಳ್ಳಿ ಗ್ರಾಮದ ಸರ್ವೇ ನಂ. 31/1, 31/2ರಲ್ಲಿ ಸಾಗುವಳಿ ಮತ್ತು ಅನುಭವ ಇಲ್ಲದ ಮಾಲೀಕರಿಂದ ದಲ್ಲಾಳಿಗಳು ಜಮೀನು ಖರೀದಿಸಿ, ಸ್ಥಳೀಯ ವಾಸಿಗಳಿಗೆ ನೀಡುತ್ತಿರುವ ಕಿರುಕುಳವನ್ನು ತಪ್ಪಿಸುವಂತೆ ಒತ್ತಾಯಿಸಿ ಕೋಟೆಕೊಪ್ಪ ಮತ್ತು ಸಂಪಳ್ಳಿ ಗ್ರಾಮಸ್ಥರು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಲ್ಲೂಕು ಪ್ರಗತಿಪರ ಯುವ ಒಕ್ಕೂಟದ ಅಧ್ಯಕ್ಷ ರಮೇಶ್ ಕೆಳದಿ, ಉದ್ದೇಶಿತ ಜಾಗದಲ್ಲಿ ಸುಮಾರು 6 ದಶಕಗಳಿಂದ 10 ಕುಟುಂಬಗಳು ಸಾಗುವಳಿ ಮಾಡಿಕೊಂಡು ವಾಸ ಮಾಡುತ್ತಿವೆ. ಅನುಭವ ಇರುವ ಜಮೀನಿನಲ್ಲಿ ಕೆಲವು ಗೂಂಡಾ ವ್ಯಕ್ತಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಜಮೀನು ನಮ್ಮದು ಎಂದು ಐದು ತಿಂಗಳಿನಿಂದ ಕಿರುಕುಳ ನೀಡುತ್ತಾ ಬರುತ್ತಿದ್ದಾರೆ. ತಕ್ಷಣ ಉಪವಿಭಾಗಾಧಿಕಾರಿಗಳು ನಕಲಿ ದಾಖಲೆಗಳನ್ನು ವಜಾ ಮಾಡಿ ಭೂಮಿಯ ಹಕ್ಕನ್ನು ಅಲ್ಲಿ ವಾಸ ಮಾಡುತ್ತಿರುವ ರೈತರಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಗ್ರಾಮದ ಪ್ರಮುಖ ಲಕ್ಷ್ಮಣ್ ಮಾತನಾಡಿ, ಸಂಪಳ್ಳಿ ಗ್ರಾಮದಲ್ಲಿ ಹಲವು ದಶಕಗಳಿಂದ ಐದಾರು ಕುಟುಂಬಗಳು ಜಮೀನು ಸಾಗುವಳಿ ಮಾಡಿಕೊಂಡು ಬರುತ್ತಿದೆ. ಸಾಗುವಳಿ ಮಾಡಿಕೊಂಡು ಬರುತ್ತಿರುವ ರೈತರ ಮೇಲೆ ಕೆಲವು ಗೂಂಡಾಗಳು ನಿರಂತರ ದಬ್ಬಾಳಿಕೆ ನಡೆಸುತ್ತಿದ್ದಾರೆ. ಜಮೀನಿಗೆ ಸಂಬಂಧಪಟ್ಟಂತೆ ನಕಲಿ ದಾಖಲೆಗಳನ್ನು ಯಾರೋ ಅಧಿಕಾರಿಗಳು ಮಾಡಿ ಕೊಟ್ಟಿದ್ದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ತಕ್ಷಣ ನಕಲಿ ದಾಖಲೆಗಳನ್ನು ವಜಾ ಮಾಡಿ, ಗ್ರಾಮಸ್ಥರಿಗೆ ರಕ್ಷಣೆ ಕೊಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪುಟ್ಟಪ್ಪ, ರಾಜು, ಶರತ್, ಸೋಮು, ಭರತ್, ಗಣಪತಿ, ದೀಪ, ರೇಣುಕಮ್ಮ, ನೀಲಮ್ಮ, ಶೀಲಾ ಇನ್ನಿತರರು ಹಾಜರಿದ್ದರು.







Publisher, Editor, Printer & Owned by S.K.Gajendra Swamy, No-19, J.H. Patel Commercial Complex, Nehru Road, SHIVAMOGGA. 577201, mo: 94482 56183, 94481 70830, Printed at: Yogitha Printers, Vijaya Rice Mill Building, Buddha Nagar, shivamogga